ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	649
ಮಾನ್ಯ ಸದಸ್ಯರ ಹೆಸರು:	ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ:	22/07/2019
ಉತ್ತರಿಸುವ ಸಚಿವರು:	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಶಂಕರಪ್ಪನವರ ವರದಿಯಂತೆ ಮರಾಠಾ ಸಮಾಜವನ್ನು ಕೂಡಲೇ 3 'ಬಿ' ಯಿಂದ 2(ಎ)ಗೆ ಸೇರಿಸಲು ಶಿಫಾರಸ್ಸು ಮಾಡಲು ಮರಾಠಾ ಸಮಾಜದವರು ಪ್ರತಿಭಟನೆ ಮಾಡಿ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದು, ಇಲ್ಲಿಯವರೆಗೆ ಸರ್ಕಾರ ಯಾವುದೇ ತರಹದ ನಿರ್ಧಾರ ಕೈಗೊಳ್ಳದಿರುವುದರಿಂದ ಮರಾಠಾ ಸಮಾಜದವರು ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಕೈಗೊಳ್ಳಲು ತೀರ್ಮಾನಿಸಿದ್ದು; ಈ ವಿಷಯದಲ್ಲಿ ಸರ್ಕಾರ ಕೂಡಲೇ ಕ್ರಮಕೈಗೊಳ್ಳುವುದೇ;(ವಿವರ ನೀಡುವುದು)	ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಹಿಂದಿನ ಅಧ್ಯಕ್ಷರಾದ ಶ್ರೀ ಶಂಕರಪ್ಪ ನೇತೃತ್ವದ ಆಯೋಗವು ಪ್ರವರ್ಗ-3'ಬಿ' ನಲ್ಲಿರುವ ಮರಾಠ ಜನಾಂಗವನ್ನು 2'ಎ' ಗೆ ಸೇರಿಸಲು ಪ್ರಥಮ ವರದಿಯಲ್ಲಿ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹಾಲಿ ಆಯೋಗಕ್ಕೆ ಮರಾಠ ಜನಾಂಗವನ್ನು 2'ಎ' ಗೆ ಸೇರ್ಪಡೆ ಮಾಡುವಂತೆ ಮನವಿಗಳು ಸ್ವೀಕೃತವಾಗಿದ್ದು, ಈ ಮನವಿಗಳ ಮೇಲೆ ಬಹಿರಂಗ ವಿಚಾರಣೆಯನ್ನು ಆಯೋಗವು ಪೂರ್ಣಗೊಳಿಸಿದೆ. 2015-16ನೇ ಸಾಲಿನಲ್ಲಿ ಆಯೋಗವು ಕೈಗೊಂಡಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಡಿ ಪ್ರತಿಯೊಂದು ಜಾತಿ/ಜನಾಂಗಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸದರಿ ಸಮೀಕ್ಷೆಯಡಿ ಮರಾಠ ಜನಾಂಗದ ಬಗ್ಗೆ ಲಭ್ಯವಾಗಿರುವ ಮಾಹಿತಿಯ ಆಧಾರದ ಮೇಲೆ ಹಾಗೂ ಬಹಿರಂಗ ವಿಚಾರಣೆಯಲ್ಲಿ ಲಭ್ಯವಾಗಿರುವ ಅಂಶಗಳನ್ನಾಧರಿಸಿ ಆಯೋಗವು ವರದಿಯನ್ನು ಸಿದ್ಧಪಡಿಸಿದ್ದು, ಸರ್ಕಾರಕ್ಕೆ ಸಲ್ಲಿಸಿದ ನಂತರ, ಅಗತ್ಯ ಕ್ರಮಕೈಗೊಳ್ಳಲಾಗುವುದು.
ಆ)	ಈಗಾಗಲೇ ಪಕ್ಕದ ಮಹಾರಾಷ್ಟ್ರ ರಾಜ್ಯದಲ್ಲಿ ಮರಾಠಾ ಸಮಾಜಕ್ಕೆ ಸಂಬಂಧಿಸಿದಂತೆ (ಅಲ್ಲಿಯ ರಾಜ್ಯ ಸರ್ಕಾರ ಸದರಿ ವಿಷಯದಲ್ಲಿ) ಸೂಕ್ತ ಅನುಕೂಲ ಮಾಡಿಕೊಟ್ಟಂತೆ,	ಭಾರತ ಸಂವಿಧಾನದ ಅನುಚ್ಛೇಧ 15(4) ರಂತೆ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಅನುಚ್ಛೇಧ 16(4)ರ ಮೇರೆಗೆ ನೇಮಕಾತಿಗಳಲ್ಲಿ ಸೌಲಭ್ಯ ಪಡೆಯುವುದಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಸರ್ಕಾರಿ

	ಇಲ್ಲಿಯ ಮರಾಠರಿಗೂ ಅದೇ ರೀತಿಯ ಸೌಲಭ್ಯ ಮಾಡಿಕೊಡಲು ತಾರತಮ್ಯ ಮಾಡುತ್ತಿರುವುದು ಸರಿಯೇ? (ವಿವರ ನೀಡುವುದು).	ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30.03.2002ರಲ್ಲಿನ ಜಾತಿ ಮೀಸಲಾತಿ ಪಟ್ಟಿಯಲ್ಲಿ ಹಿಂದುಳಿದ ವರ್ಗಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿ ಪ್ರತಿಶತ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ.

ಪ್ರವರ್ಗ	ನಿಗದಿಪಡಿಸಿರುವ ಪ್ರತಿಶತ ಮೀಸಲಾತಿ
ಪವರ್ಗ-1	4%
ಪ್ರವರ್ಗ-2(ಎ)	15%
ಪ್ರವರ್ಗ-2(ಬಿ)	4%
ಪ್ರವರ್ಗ-3(ಎ),	4%
ಪ್ರವರ್ಗ-3(ಬಿ)	5%
ಪರಿಶಿಷ್ಟ ಜಾತಿಗಳು	15%
ಪರಿಶಿಷ್ಟ ಪಂಗಡಗಳು	3%
ಒಟ್ಟು	**50%**

ಮರಾಠ ಜನಾಂಗವು ಸದರಿ ಸರ್ಕಾರಿ ಆದೇಶದ ಪ್ರವರ್ಗ 3'ಬಿ' ನಲ್ಲಿ ಸೇರಿದ್ದು, ಒಟ್ಟಾರೆ 3'ಬಿ' ನಲ್ಲಿರುವ ಜಾತಿಗಳು ಶೇಕಡ 5 ರಷ್ಟು ಮೀಸಲಾತಿ ಸೌಲಭ್ಯ ಪಡೆಯುತ್ತಿದ್ದಾರೆ.

ಸದರಿ ಆದೇಶದಲ್ಲಿ ಹಿಂದುಳಿದ ವರ್ಗಗಳಿಗೆ ಶೇಕಡ 32 ರಷ್ಟು, ಪರಿಶಿಷ್ಟ ಜಾತಿಗಳಿಗೆ ಶೇಕಡ 15 ರಷ್ಟು ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇಕಡ 3 ರಷ್ಟು ಸೇರಿ ಒಟ್ಟು ಶೇಕಡ 50 ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಲಾಗಿದೆ.

ಸಂಖ್ಯೆ: ಹಿಂವಕ 63 ಬಿಸಿಎ 2019

(ಸಿ. ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

	ಕೇಂದ್ರಗಳ ಹೆಸರು	ಸ್ವಂತ (ಮೆ.ಟನ್)	ಬಾಡಿಗೆ (ಮೆ.ಟನ್)	ಒಟ್ಟು (ಮೆ.ಟನ್)
XXIII	ಗುಲ್ಬರ್ಗ ಜಿಲ್ಲೆ			
112	ಕಲ್ಬುರ್ಗಿ ಫ–1	19496	31203	50699
113	ಕಲ್ಬುರ್ಗಿ ಫ–2	39000	37907	76907
114	ಶಹಬಾದ್	1000	0	1000
115	ಜೇವರ್ಗಿ	5900	0	5900
116	ಚಿತ್ತಪುರ	6500	0	6500
117	ಚಿಂಚೊಳಿ	15560	0	15560
118	ಅಫ್ಜಲ್‌ಪುರ	0	5300	5300
	ಒಟ್ಟು	**87456**	**74410**	**161866**
XXIV	ಯಾದಗಿರಿ ಜಿಲ್ಲೆ			
119	ಯಾದಗಿರಿ	8460	3970	12430
120	ಶಹಪುರ ಫ–1	5000	0	5000
121	ಹಟ್ಟಿಗೂಡೂರು	27800	0	27800
122	ಶೋರಾಪುರ	10500	300	10800
123	ಕೆಂಬಾವಿ	7000	0	7000
124	ಹುಣಸಗಿ	3000	0	3000
	ಒಟ್ಟು	**61760**	**4270**	**66030**
XXV	ಬೀದರ್ ಜಿಲ್ಲೆ			
125	ಬೀದರ್	57300	10021	67321
126	ಔರಾದ್	5000	0	5000
127	ಬಾಲ್ಕಿ	5000	4932	9932
128	ಬಸವಕಲ್ಯಾಣ	10000	4944	14944
	ಒಟ್ಟು	**77300**	**19897**	**97197**
XXVI	ಬಿಜಾಪುರ ಜಿಲ್ಲೆ			
129	ಬಿಜಾಪುರ ಫ–1	5600	2300	7900
130	ಬಿಜಾಪುರ ಫ–2	17600	0	17600
131	ಬಿಜಾಪುರ ಫ–3	35000	0	35000

	ಕೇಂದ್ರಗಳ ಹೆಸರು	ಸ್ವಂತ (ಮೆ.ಟನ್)	ಬಾಡಿಗೆ (ಮೆ.ಟನ್)	ಒಟ್ಟು (ಮೆ.ಟನ್)
132	ಇಂಡಿ	2000	0	2000
133	ಸಿಂಧಗಿ	5000	0	5000
134	ಮುದ್ದೇಬಿಹಾಳ	7000	585	7585
	ಒಟ್ಟು	**72200**	**2885**	**75085**
XXVII	**ರಾಯಚಚೂರು ಜಿಲ್ಲೆ**			
135	ರಾಯಚೂರು ಫ–1	23280	5790	29070
136	ರಾಯಚೂರು ಫ–2	43075	0	43075
137	ಮಾನ್ವಿ	10800	0	10800
138	ಲಿಂಗಸಗೂರು	3500	0	3500
139	ಮಸ್ಕಿ	5000	610	5610
140	ಸಿಂಧನೂರು ಫ–1	34020	7858	41878
141	ಸಿಂಧನೂರು ಫ–2	23000	1369	24369
	ಒಟ್ಟು	**142675**	**15627**	**158302**
XXVIII	**ಕೊಪ್ಪಳ ಜಿಲ್ಲೆ**			
142	ಕೊಪ್ಪಳ	5000	0	5000
143	ಗಂಗಾವತಿ	23080	0	23080
144	ಕಾರಟಗಿ	2200	5828	8028
145	ಕುಷ್ಟಗಿ	6500	0	6500
146	ಕುಕನೂರು	3800	0	3800
	ಒಟ್ಟು	**40580**	**5828**	**46408**
XXIX	**ಬಳ್ಳಾರಿ ಜಿಲ್ಲೆ**			
147	ಬಳ್ಳಾರಿ ಫ–1	9900	0	9900
148	ಬಳ್ಳಾರಿ ಫ–2	12300	0	12300
149	ಹೊಸಪೇಟೆ	26525	0	26525
150	ಹಗರಿಬೊಮ್ಮನಹಳ್ಳಿ	2500	0	2500
151	ಸಿರಗುಪ್ಪ	8000	0	8000
152	ಕಂಪ್ಲಿ	19130	0	19130
153	ಹೆಚ್. ಹಡಗಲಿ	1000	0	1000
	ಒಟ್ಟು	**79355**	**0**	**79355**
	ಒಟ್ಟಾರೆ	**1570318**	**156230**	**1726548**